ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ
ನ್ಯಾಯಾಲಯ,ಯಾದಗಿರಿ.

**Crl Misc No. 1364/2024**
**PW : 1**

ದಿನಾಂಕ: **05-08-2025** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟಿ ಸವಾಲು ಎದುರುದಾರ ಪರ ಶ್ರೀ. ಎಸ್. ಎಸ್. ಪಿ. ವಕೀಲರಿಂದ:

1. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನನ್ನ ತವರು ಮನೆ ಹೆಡಗಿಮದ್ರಾ. ನಾನು ಈಗ ಹೆಡಗಿಮದ್ರಾ ಗ್ರಾಮದಲ್ಲಿ ವಾಸವಾಗಿರುತ್ತೇನೆ. ನನ್ನ ಮದುವೆಯಾಗಿ ಈಗ 17 ವರ್ಷಗಳಾಗಿರುತ್ತವೆ. ನನ್ನ ಮದುವೆಯಾದ ನಂತರ 1 ವರ್ಷದಲ್ಲಿ ಅರ್ಜಿದಾರ ನಂಬರ 2 ರವರು ಹುಟ್ಟಿರುತ್ತಾರೆ. ನನ್ನ ಬಾಣಂತನ ನನ್ನ ತವರು ಮನೆಯಲ್ಲಿ ಆಗಿರುತ್ತದೆ. ನಾನು ಬಾಣಂತನಕ್ಕೆ ತವರು ಮನೆಗೆ ದಿನ ತುಂಬಿದ ನಂತರ ಹೋಗಿರುತ್ತೇನೆ. ನಾನು ಬಾಣಂತನಕ್ಕೆ ಹೋದ ನಂತರ ಮರಳಿ ಹತ್ತಿಕುಣಿಗೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೆರಿಗೆಯಾದ 3 ತಿಂಗಳ ನಂತರ ಹತ್ತಿಕುಣಿಗೆ ಬಂದಿರುತ್ತೇನೆ. ಹೇರಿಗೆಯಾದ ನಂತರ 1 ವರ್ಷಗಳ ಕಾಲ ಹತ್ತಿಕುಣಿ ಗ್ರಾಮದಲ್ಲಿದ್ದೆ. ಸದರಿ 1 ವರ್ಷದ ನಂತರ ಎದುರುದಾರನು ಹೊಡೆ-ಬಡೆ ಮಾಡಿದ್ದರಿಂದ ತವರು ಮನೆಗೆ ಹೋಗಿರುತ್ತೇನೆ. ನಾನು 1 ವರ್ಷದಿಂದ ಇಲ್ಲಿಯವರೆಗೆ ತವರು ಮನೆಯಲ್ಲಿಯೇ ಇದ್ದೆ ಎಂದರೆ ಸಾಕ್ಷಿಯು ಹೊಡೆ-ಬಡೆ ಮಾಡಿದ ನಂತರ ಎದುರುದಾರನು ಕರೆಯಲು ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ಆ 1 ವರ್ಷ ಆದ ನಂತರ ನಾನು ತವರು ಮನೆಯಲ್ಲಿಯೇ ಇದ್ದೆ, ಎದುರುದಾರನ ಕಡೆ ಹೋಗಿರುವುದಿಲ್ಲ ಎಂದರೆ ಸಾಕ್ಷಿಯು 2-3 ಸಲ ಹೋಗಿರುತ್ತೇನೆ ಎಂದು ನುಡಿಯುತ್ತಾರೆ.

2. ಸದರಿ ಎದುರುದಾರನು ಹೊಡೆ-ಬಡೆ ಮಾಡುತ್ತಾನೆ ಎಂದು ಪೊಲೀಸ ಠಾಣೆಯಲ್ಲಿ ದೂರು ನೀಡಿರುವುದಿಲ್ಲ. ಸದರಿ ನನ್ನ ಮತ್ತು ಎದುರುದಾರನ ಒಳ ಸಂಬಂಧದಿಂದ ಮದುವೆಯಾಗಿರುತ್ತದೆ ಆದ್ದರಿಂದ ದೂರು ನೀಡಿರುವುದಿಲ್ಲ. ಎದುರುದಾರನು ನನ್ನ ತಾಯಿಯ ಚಿಕ್ಕಮ್ಮ ಮಗ. ನನ್ನ ಗಂಡನಿಗೆ ಇಬ್ಬರು ಅಣ್ಣ-ತಮ್ಮಂದಿರು. ಎದುರುದಾರನ ಅಣ್ಣ ಭೀಮಣ್ಣ 1 ವರ್ಷದ ಮುಂಚೆ ಮರಣ ಹೊಂದಿರುತ್ತಾನೆ. ಭೀಮಣ್ಣನಿಗೆ ಇಬ್ಬರು ಗಂಡು ಮಕ್ಕಳು ಒಬ್ಬಳು ಹೆಣ್ಣು ಮಗಳು ಇದ್ದಾಳೆ. ನನ್ನ ಅತ್ತೆ ಸಾಬಮ್ಮ ಜೀವಂತ

ಇರುತ್ತಾರೆ. ಸಾಬಮ್ಮ ಇವರಿಗೆ 70 ವರ್ಷ ವಯಸ್ಸು ಇದೆ. ನನ್ನ ಮಾವ ನನ್ನ ಗಂಡ ಚಿಕ್ಕವನಿದ್ದಾಗ ಮರಣ ಹೊಂದಿರುತ್ತಾನೆ. ಸದರಿ ಭೀಮಣ್ಣನ ವಾರಸುದಾರರ ಜವಾಬ್ದಾರಿ ಎದುರುದಾರನ ಮೇಲೆ ಇರುತ್ತದೆ ಎಂದರೆ ಸಾಕ್ಷಿಯು ಅವರು ಬೇರೆ ಇರುತ್ತಾರೆ ಎಂದು ನುಡಿಯುತ್ತಾರೆ. ಭೀಮಣ್ಣನ ಮಕ್ಕಳು, ತಾಯಿ ನೋಡಿಕೊಳ್ಳುವ ಜವಾಬ್ದಾರಿ ಎದುರುದಾರನಿಗೆ ಇರುತ್ತದೆ ಎಂದರೆ ಸರಿಯಲ್ಲ. ಸಾಬಮ್ಮ ಬೇರೆಯಾಗಿ ವಾಸಿಸುತ್ತಿದ್ದಾಳೆ. ಸಾಬಮ್ಮನಿಗೆ ದವಾಖಾನೆಯ ಖರ್ಚು ನೋಡಲು ಎದುರುದಾರನು ನೋಡಿಕೊಳ್ಳುತ್ತಾನೆ ಎಂದರೆ ಸಾಕ್ಷಿಯು ಅವಳಿಗೆ 2 ಎಕರೆ ಜಮೀನು ನೀಡಿರುತ್ತಾರೆ ಎಂದು ನುಡಿಯುತ್ತಾರೆ.

3. ನಾನು ಹಾಕಿರುವ ಪಹಣಿಗಳು ಎದುರುದಾರನ ಹೆಸರಿನಲ್ಲಿ ಇರುವುದಿಲ್ಲ ಎಂದರೆ ಸಾಕ್ಷಿಯು ಸಾಬಮ್ಮ ಇವರ ಹೆಸರಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಸಾಬಮ್ಮ ನನ್ನ ಗಂಡನಿಗೆ ಮತ್ತು ಭೀಮಣ್ಣನಿಗೆ ಪಾಲು ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿಯು ಹೆಸರಿಗೆ ಮಾಡಿಕೊಟ್ಟಿರುವುದಿಲ್ಲ ಸಾಗುವಳಿ ಮಾಡಿಕೊಂಡು ಇರಲು ಹೇಳಿರುತ್ತಾರೆ. ನಾನು ಈ ವಿಷಯವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರನು ಎರಡನೆ ಮದುವೆಯಾಗಿರುತ್ತಾನೆ ಎಂದು ನಾನು ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ನನ್ನ ಮದುವೆಯಾದ ನಂತರ ಎಲ್ಲರೂ ಜಂಟಿಯಾಗಿ ವಾಸಿಸುತ್ತಿದ್ದು ಎಂದರೆ ಸಾಕ್ಷಿಯು ನನ್ನ ಮದುವೆಯಾದ ನಂತರ ಬೇರೆಯಾಗಿ ವಾಸಿಸುತ್ತಿದ್ದೇವೆ ಎಂದು ನುಡಿಯುತ್ತಾರೆ.

4. ನನ್ನ ತಂದೆ-ತಾಯಿ ಒಕ್ಕಲುತನ ಕೆಲಸ ಮಾಡುತ್ತಾರೆ ಎಂದರೆ ಸರಿ. ನಾನು ಮನೆಯಲ್ಲಿ ಬಟ್ಟೆ ಹೊಲೆಯುವ ಕೆಲಸ ಮಾಡುತ್ತಿದ್ದೆ. ನಾನು ಮದುವೆಗಿಂತ ಮುಂಚೆ ದಿನಾಲೂ 30 ರಿಂದ 40 ರೂ. ಸಿಗುತ್ತಿತ್ತು. ನಾನು ಮನೆಯಲ್ಲಿ ಬಟ್ಟೆ ಹೊಲೆಯುವ ಕೆಲಸ ಈಗ ಮಾಡುತ್ತೇನೆ ಎಂದರೆ ಸರಿಯಲ್ಲ. ಸದರಿ ಕೆಲಸದಿಂದ ನಾನು ಅರ್ಜಿದಾರ ನಂಬರ 2 ರವರಿಗೆ ನೋಡಿಕೊಳ್ಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮದುವೆಯಾದ ನಂತರ ಎಲ್ಲಾ ಕುಟುಂಬದವರು ಹೊಲದಲ್ಲಿ ಕೆಲಸ ಮಾಡುತ್ತಿದ್ದೇವು ಎಂದರೆ ಸರಿ. ಸದರಿ ನನಗೆ ಕೆಲಸ ಹಚ್ಚಿದ್ದರಿಂದ ಜಗಳ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೆರಿಗೆಯಾದ ನಂತರ ಬೇರೆ ಮನೆ ಮಾಡಿ ಎಂದು ಜಗಳ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಎಲ್ಲಾ ಕುಟುಂಬದವರ ಜೊತೆ ಜಗಳ ಮಾಡಿರುತ್ತೇನೆ ಎಂದರೆ ಸಾಕ್ಷಿಯು ಎಲ್ಲರೂ ಹೊಂದಾಣಿಕೆಯಿಂದ ಇದ್ದೇವೆ ಎಂದು ನುಡಿಯುತ್ತಾರೆ. ಎದುರುದಾರನು ಈಗಲೂ ಕೂಡ

ಸಂಸಾರ ನಡೆಸಲು ತಯಾರಿರುತ್ತಾನೆ ಎಂದರೆ ಸಾಕ್ಷಿಯು ಅವತ್ತೆ ಚೆನ್ನಾಗಿ ನೋಡಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ.

5. ಮದುವೆಯ ಸಮಯದಲ್ಲಿ 2 ತೊಲೆ ಬಂಗಾರ ಮತ್ತು 30,000/- ರೂ. ಗೃಹ ಬಳಕೆ ವಸ್ತುಗಳನ್ನು ನೀಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮದುವೆಯಾದ ನಂತರ 2 ವರ್ಷಗಳ ಕಾಲ ಚೆನ್ನಾಗಿ ಸಂಸಾರ ಮಾಡಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರನು ನನಗೆ ಹಣ ತೆಗೆದುಕೊಂಡು ಬಾ ಎಂದು ಕಿರುಕುಳ ನೀಡಿರುತ್ತಾನೆ ಎಂದರೆ ಸರಿಯಲ್ಲ. 13-14 ವರ್ಷಗಳು ಕೂಡ ಎದುರುದಾರನು ನನಗೆ ಕರೆಯಲು ಬಂದಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮನೆಗೆ ಹೋದರೂ ಕೂಡ ಹೊರಗೆ ಹಾಕಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತಾಯಮ್ಮ ಜೊತೆ ಎರಡನೆ ಮದುವೆಯಾಗಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2-3 ಸಲ ಪಂಚಾಯತಿ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೋದಾಗ ಮನೆಗೆ ಬೀಗ ಹಾಕಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರನಿಗೆ 6 ಎಕರೆ ಜಮೀನು ಮತ್ತು 10 ಲಕ್ಷ ಆದಾಯವಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಜೀವನಾಂಶಕ್ಕಾಗಿ ಯಾವುದೇ ಆಧಾರ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಗಂಡನ ಜೊತೆ ಬೇರೆಯಾಗಿ ವಾಸಿಸಬೇಕು ಎಂಬ ಉದ್ದೇಶದಿಂದ ಈ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲ</u>

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ